ಬರುವುದು. ಪ್ರಯತ್ನ ಪಟ್ಟಿದ್ದರೆ ಜೂನಿಯರ್ ಪಿ.ಟಿ. ಉಷಾ ಆಗಬಹುದಿತ್ತೇನೋ ಅಂತ ಈಗ ಅನ್ನಿಸುತ್ತಿದೆ. ಅಷ್ಟರಲ್ಲೇ ಕಂಡಕ್ಟರ್ ಲಯಬದ್ಧವಾಗಿ ಕರೆಯಲು ಶುರು ಮಾಡಿರುತ್ತಾನೆ. ಕರೆಯ ಓಘದ ಹದಕ್ಕನುಸಾರವಾಗಿ ಊರುಗಳ ಅಕ್ಷರಗಳೆಲ್ಲಾ ನುಂಗಿಕೊಂಡು ಹೊಸ ರೀತಿಯಲ್ಲಿ ಕೇಳಿಸುತ್ತಿದ್ದವು. ಪಾರಾಣೆ, ನಾಪೊಕ್ಲು ಬೆಟಗೇರಿ, ಕಕ್ಕಬ್ಬೆ... ವಿರಾಪೆ... ವಿರಾಪೆ (ವಿರಾಜಪೇಟೆ) ಮತ್ತೊಂದು ಕಡೆಯಿಂದ ಚಯ್ಯಂಡಾಣೆ, ಕರಿಕೆ... ಬಾಮಂಡಲ ಬಾಮಂಡಲ (ಭಾಗ ಮಂಡಲ). ಇಡೀ ಬಸ್ಸು ತಂಗುದಾಣ ಕಂಡಕ್ಟರ್‌ನ ಲಯಬದ್ಧ ಕರೆಯುವಿಕೆಯಲ್ಲಿ ಲೀನವಾಗಿ ಬಿಡುತ್ತಿತ್ತು.

ಈ ಬದುಕಿನ ಸಂತೆಯಲ್ಲಿ ಎಷ್ಟೊಂದು ರಾಗಗಳು? ತರಕಾರಿ ಸಂತೆಗೆ ಹೋದರೆ ಒಂದು ರೀತಿ, ಮೀನು ಮಾರ್ಕೆಟಿಗೆ ಹೋದರೆ ಇನ್ನೊಂದು ರೀತಿ, ಹೂವಿನ ಮಾರುಕಟ್ಟೆಯಲ್ಲಿ ಮತ್ತೊಂದು ರೀತಿಯ ರಾಗಗಳು. ಕೆಲಸ ಕಾರ್ಯ ಮುಗಿದ ಮೇಲೆ ಬಸ್ಸೇರಿದ ಎಲ್ಲ ರಾಗಲಯಗಳು ಇಲ್ಲಿ ಏಕತ್ರವಾಗಿ ಬೆಸೆದುಕೊಂಡು ಭಾವಗೀತೆಯಾಗುತ್ತದೆ. ಆ ಲೋಕದೊಳಗೂ ಒಂದೊಂದು ಲೋಕ. ಕೆಲವು ಸೀಟು ಸಿಕ್ಕ ಖುಷಿಯಲ್ಲಿ ಭದ್ರವಾಗಿ ಅಂಡು ಊರಿದರೆ ಇನ್ನು ಕೆಲವರು ನಿಂತಲ್ಲೇ ತೂಕಡಿಸುತ್ತಾರೆ. ಮತ್ತೆ ಕೆಲವರು ಓದುವುದು, ಈಗಿನವರು ಫೋನಿನೊಳಗೆ. ತಲೆಯ ಎಣ್ಣೆ ಜಿಡ್ಡು, ಜುಟ್ಟಿನ ಹೂವ ಗಂಧ, ಯಾರದೋ ಉಳ್ಳವರ ಬಟ್ಟೆಯ ಮೇಲಿನ ಅತ್ತರಿನ ಘಮಲು, ಬೆವರಿನ ವಾಸನೆ, ಹೊಸ ಪುಸ್ತಕದ ಪರಿಮಳ, ಸಂತೆಯ ಘಮ ಎಲ್ಲ ಒಂದೆಡೆ ಕಲೆತು ಬಸ್ಸಿನೊಳಗೂ ವಿಶಿಷ್ಟವಾದ ಪರಿಮಳದ ಹಾಡು.



ಅದಾಗಲೇ ಮುಂದೆ ಹೋದವರೊಂದಿಗೆ ಸೀಟೊಂದು ಕಾದಿರಿಸಲು ಹೇಳಿರುತ್ತಿದ್ದೆವು. ಆ ನಿಟ್ಟಿನಲ್ಲಿ ಬಸ್ಸು ಬಹಳ ಉದಾರಿ. ಸರ್ಕಾರಿ ಬಸ್ಸು ಆದರೂ ಮತ್ಯಾರಿಗೋ ಸೀಟು ಕಾದಿರಿಸುವಷ್ಟು ಸ್ವಾತಂತ್ರ್ಯ ಇದೆ. ಅದೆಷ್ಟೋ ಪ್ರೇಮ ಪ್ರಕರಣಗಳಿಗೆ ನಾಂದಿ ಹಾಡಿದ್ದು, ಹೆಸರಿನ ರುಜುವಾತು ಹಾಕಿ ಪ್ರೇಮವನ್ನು ಲೋಕಾಂತವಾಗಿಸಿದ್ದು ಇಲ್ಲಿಯೇ. ಎಷ್ಟೋ ವರ್ಷದ ಬಳಿಕ ಊರಿನ ಯಾವುದೋ ಒಂದು ಮದುವೆಯಲ್ಲಿ ಆ ಬಸ್ಸಿನಲ್ಲಿ ಹೋಗುವವರೆಲ್ಲ ಸಿಕ್ಕಿದ್ದರು. ಅವರಿಗೆಲ್ಲ ಮದುವೆಯಾಗಿತ್ತು. ಆದರೆ ಒಂದೇ ಸೀಟಿನಲ್ಲಿ ಜತೆಗೆ ಕುಳಿತು ಪ್ರೇಮಗೀತೆ ಬರೆದ ಹುಡುಗಿ ಅವರ ಬಗಲಲ್ಲಿ ಇರಲಿಲ್ಲ. ಅವಳು ಮತ್ಯಾರದೋ ಜೊತೆಗೆ ದಾಂಪತ್ಯ ಗೀತೆ ಹಾಡಿದ್ದಳು. ಅಲ್ಲಲ್ಲಿ ನಿಲ್ಲಿಸಿ ಅಲ್ಲಲ್ಲಿ ಹತ್ತಿಸಿಕೊಳ್ಳುವ ಬಸ್ಸು ಕೊನೇ ತನಕ ಯಾರನ್ನೂ ಕೊಂಡೊಯ್ಯಲಿಲ್ಲವೇ? ವಿಷಾದವಾಯಿತು. ಆದರೆ ನವಿರು ಪ್ರೇಮದ ಘಳಿಗೆಗಳಿಗೆ ಮಾತ್ರ ಬಸ್ಸೊಂದು ಸಾಕ್ಷಿ ಆಯಿತು.

ಹೆಚ್ಚಿನ ಖಾಸಗಿ ಬಸ್ಸುಗಳು ದೇವರ ಹೆಸರು ಹೊತ್ತವು. ರಾಮ, ಭಗಂಡೇಶ್ವರ, ವಿನಾಯಕ... ಹೀಗೆ. ಮತ್ತೊಂದು ಬಸ್ಸಿನಲ್ಲಿ ಹೆಚ್ಚಾಗಿ ಶಾಲಾ–ಕಾಲೇಜು ಮಕ್ಕಳೇ ಇರುತ್ತಿದ್ದದ್ದು. ಅದರ ಹೆಸರು ಮಾತ್ರ 'ಶಕ್ತಿ'. ಬಹುಶಃ ಯುವಕರೇ ನಮ್ಮ ದೇಶದ ಶಕ್ತಿಯೂ ಬಸ್ಸಿನ ಆರ್ಥಿಕ ಶಕ್ತಿಯೂ ಅನ್ನುವುದನ್ನು ಅವರು ಮನಗಂಡಿರಬೇಕು.

ಒಂದು ಬಸ್ಸು ಹೊರಟದ್ದೇ ತಡ, ಅದರ ಜೊತೆಗೆ ಮತ್ತೊಂದು ಪೈಪೋಟಿಗಿಳಿದಂತೆ ಓವರ್ ಟೇಕ್ ಮಾಡುತ್ತದೆ. ಕೆಲವೊಮ್ಮೆ ಎಷ್ಟು ಹಾರನ್ ಗುದ್ದಿದರೂ ನಾನು ಮುಂದೆ ಹೋಗಲು ಬಿಡೆ ಎನ್ನುವಂತೆ ಹಾದಿ ಮಧ್ಯದಲ್ಲೇ ಸಾಗುತ್ತದೆ. ಯಾವುದೋ ಒಂದು ತಿರುವಿನಲ್ಲಿ ಎರಡು ಬಸ್ಸುಗಳು ಸಿಕ್ಕು ಡ್ರೈವರ್‌ಗಳಿಬ್ಬರೂ ಮಾತಿನ ಚಕಮಕಿಗೆ ಇಳಿಯುತ್ತಾರೆ, ಮುಂದಿನ ಬಸ್ಸನ್ನು ಹಿಂದಿಕ್ಕಿ ಓಡಿಸುತ್ತಾರೆ. ಇಲ್ಲಿ ಓಟವೊಂದೇ ಮುಖ್ಯ. ಗಮ್ಯ ತಲುಪಿದ ಮೇಲೆ ಎಲ್ಲ ಚಾಲಕರೂ ಯಾವುದೋ ಹೋಟೇಲಿನಲ್ಲಿ ಚಹಾ ಹೀರುತ್ತಾ ಬಸ್ಸಿನೊಳಗಿನ ರಸವತ್ತಾದ ಕಥೆಗಳಿಗೆ ಕಿವಿಯಾಗುತ್ತಾರೆ.

'ಅವಸರವೇ ಅಪಘಾತಕ್ಕೆ ಕಾರಣ', 'ವೇಗದ ಮಿತಿ ಅರವತ್ತು ಕಿಲೋಮೀಟರ್', 'ಸುಖ ಪ್ರಯಾಣ ನಿಮ್ಮದಾಗಿರಲಿ' ಅನ್ನುವ ಹಣೆಬರಹ ಹೊತ್ತು ಸಾಗುವ ಬಸ್ಸು ಕೆಲವೊಮ್ಮೆ ಧ್ಯೇಯವಾಕ್ಯವ